ಮೂಲ ದಾವಾ ನಂಃ 29/2022

ಡಿ ಡಬ್ಲುಃ 01

ಸಾಕ್ಷಿಯನ್ನು ದಿನಾಂಕಃ **09-01-2025** ರಂದು ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು.

**ಪಾಟೀ ಸವಾಲುಃ ಶ್ರೀ ಎಂ.ಎಸ್.ಬಿ. ವಕೀಲರಿಂದಃ**

ನನ್ನ ತಾಯಿಯ ಮನೆಯು ಉಪ್ಪೋಣಿಯ ಮೂಲೆಗದ್ದೆ ಆಗಿದೆ. ನನ್ನ ತಾಯಿ ಮನೆಯ ಮುರ್ಡೇಶ್ವರದಲ್ಲಿದೆ ಎಂದರೆ ಸರಿಯಲ್ಲ. ನನ್ನ ತಂದೆಯ ಹೆಸರು ಜೈರುದ್ದೀನ್ ಇಸೂಬ್ ಸಾಬ್ ಎಂದರೆ ಸರಿ.

ನನ್ನ ತಾಯಿಯ ಹೆಸರು ರೆಹೆಮತುನ್ನಿಸಾ ಹಸನ್ ಶಿರೂರ ಎಂದಾಗ, ಸಾಕ್ಷಿಯು ನನ್ನ ತಾಯಿಯ ಹೆಸರು ರೆಹೆಮತುನ್ನಿಸಾ ಎಂಬುದಾಗಿ ಸಾಕ್ಷ್ಷಿ ನುಡಿದಿದ್ದಾರೆ. ನಿನ್ನ ತಾಯಿಯ ಪೂರ್ತಿ ಹೆಸರು ಏನು ಎಂದು ಕೇಳಿದಾಗ , ಸಾಕ್ಷಿಯು ನನ್ನ ತಾಯಿಯ ಹೆಸರಿನ ಮುಂದೆ ಯಾವ ಹೆಸರು ಬರುತ್ತದೆ ಎಂಬುದು ನನಗೆ ಗೊತ್ತಿಲ್ಲ ಎಂಬುದಾಗಿ ನುಡಿದಿದ್ದಾರೆ. ನನ್ನ ತಾಯಿಯ ಪೂರ್ತಿ ಹೆಸರಿನ ಕುರಿತಾಗಿ, ನ್ಯಾಯಾಲಯದ ಮುಂದೆ ದಾಖಲೆಯನ್ನು ಹಾಜರುಪಡಿಸಲು ನನಗೆ ಯಾವುದೇ ತೊಂದರೆ ಇರಲಿಲ್ಲ.

ನನ್ನ ತಾಯಿಯ ಹೆಸರು ರೆಹೆಮತುನ್ನಿಸಾ ಹಸನ್ ಶಿರೂರ ಎಂಬುದಾಗಿ ದಾಖಲೆಗಳಲ್ಲಿ ನಮೂದ ಇದ್ದದ್ದರಿಂದಲೇ ನಾವು ಉದ್ದೇಶಪೂರ್ವಕವಾಗಿ ನ್ಯಾಯಾಲಯದ ಮುಂದೆ ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ.

ಮೊಹ್ಮದ ಹಸನ್ ಶಿರೂರ ಎಂದರೆ ವಾದಿಯರ ತಂದೆ ಆಗಿರುತ್ತಾರೆ ಎಂದಾಗ, ಸಾಕ್ಷಿಯು ಈ ಬಗ್ಗೆ ನನಗೆ ಗೊತ್ತಿಲ್ಲ ಎಂಬುದಾಗಿ ನುಡಿದಿದ್ದಾರೆ. ದಾವಾ ದಾಖಲಿಸಿದ ನಂತರ ವಾದಿಯರ ತಂದೆ ಯಾರೆಂದು ನಾನು ತಿಳಿದುಕೊಂಡಿದ್ದು ಇರುವುದಿಲ್ಲ. ವಾದಿಯರ ತಾಯಿಯ ಹೆಸರು ರೆಹೆಮತುನ್ನಿಸಾ ಹಸನ್ ಶಿರೂರ ಎಂದಾಗ , ಸಾಕ್ಷಿಯು ಈ ಬಗ್ಗೆ ನನಗೆ ಗೊತ್ತಿಲ್ಲ ಎಂಬುದಾಗಿ ನುಡಿದಿದ್ದಾರೆ.

ದಾವೆಯನ್ನು ಹೂಡಿದ ನಂತರ ವಾದಿಯ ತಾಯಿಯ ಕುರಿತಾಗಿ ನಾವು ತಿಳಿದುಕೊಂಡಿದ್ದು ಇರುವುದಿಲ್ಲ. ನನ್ನ ತಾಯಿ ಹಾಗೂ ವಾದಿಯರ ತಾಯಿ ಒಬ್ಬಳೆ ಆಗಿದ್ದು, ಅವಳ ಹೆಸರು ರೆಹೆಮತುನ್ನಿಸಾ ಹಸನ್ ಶಿರೂರ ಎಂದರೆ ಅದರ ಬಗ್ಗೆ ನನಗೆ ಗೊತ್ತಿಲ್ಲ ಎಂಬುದಾಗಿ ಸಾಕ್ಷ್ಷಿ ನುಡಿದಿದ್ದಾರೆ.

ದಾವೆ ದಾಖಲಾದ ನಂತರ ವಾದಿಯರ ತಾಯಿ ಹಾಗೂ ನನ್ನ ತಾಯಿ ಬೇರೆ ಎಂಬುದರ ಕುರಿತಾಗಿ ನ್ಯಾಯಾಲಯದ ಮುಂದೆ ದಾಖಲೆಗಳನ್ನು ಹಾಜರುಪಡಿಸಿದ್ದೀರಾ ಎಂದಾಗ , ಸಾಕ್ಷಿಯು ಈ ಬಗ್ಗೆ ನನಗೆ ಗೊತ್ತಿಲ್ಲ ಎಂಬುದಾಗಿ ನುಡಿದಿದ್ದಾರೆ. ವಾದಿಯರು ಹಾಗೂ ನನ್ನ ತಾಯಿ ಒಬ್ಬಳೆ ಆಗಿರುತ್ತಾಳೆ ಎಂದರೆ ಸರಿಯಲ್ಲ. ವಾದಿಯರು ನನ್ನ ಸಹೋದರರರು ಎಂದರೆ ಸರಿಯಲ್ಲ.

ನನ್ನ ಮತ್ತು ವಾದಿಯರ ತಂದೆ ಬೇರೆ ಬೇರೆಯಾಗಿದ್ದು , ತಾಯಿ ಮಾತ್ರ ಒಬ್ಬಳೆ ಆಗಿರುತ್ತಾಳೆ ಎಂದಾಗ , ಸಾಕ್ಷಿಯು ಈ ಬಗ್ಗೆ ನನಗೆ ಗೊತ್ತಿಲ್ಲ ಎಂಬುದಾಗಿ ನುಡಿದಿದ್ದಾರೆ. ನನ್ನ ತಂದೆಯು ರೆಹೆಮತುನ್ನಿಸಾ ಹಸನ್ ಶಿರೂರವರ ಮೊದಲ ಗಂಡ ಎಂದರೆ ಸರಿ. ರೆಹೆಮತುನ್ನಿಸಾ ರವರು ನನ್ನ ತಂದೆಗೆ ತಲಾಕ್ ನೀಡಿದ ನಂತರ ಹಸನ್ ಶಿರೂರ ಎಂಬುವವರನ್ನು ಆ ನಂತರದಲ್ಲಿ ಮದುವೆ ಆಗಿದ್ದಾರೆ ಎಂದರೆ , ಸಾಕ್ಷಿಯು ಈ ಬಗ್ಗೆ ನನಗೆ ಗೊತ್ತಿಲ್ಲ ಎಂಬುದಾಗಿ ನುಡಿದಿದ್ದಾರೆ. ನನ್ನ ತಾಯಿಗೆ ತಲಾಕ್ ಆದ ಬಗ್ಗೆ ನನಗೆ ಗೊತ್ತಿಲ್ಲ.

ನನ್ನ ತಾಯಿಗೆ ಒಬ್ಬನೇ ಗಂಡ ಇದ್ದ ಬಗ್ಗೆ , ಹಾಗೂ ಅದಕ್ಕಿಂತ ಹೆಚ್ಚಿಗೆ ಗಂಡಂದಿರು ಇದ್ದ ಬಗ್ಗೆ ನನಗೆ ಗೊತ್ತಿಲ್ಲ. ನಾನು 6 ನೇ ತರಗತಿಯವರೆಗೆ ಉಪ್ಪೋಣಿಯಲ್ಲಿ ವಿದ್ಯಾಭ್ಯಾಸವನ್ನು ಮಾಡಿದ್ದೇನೆ. ಉಪ್ಪೋಣಿಯ ಶಾಲಾ ದಾಖಲೆಯಲ್ಲಿ ನನ್ನ ತಂದೆ ಮತ್ತು ತಾಯಿಯ ಹೆಸರು ನಮೂದಾಗಿರುತ್ತದೆ ಎಂದರೆ ಸರಿ. ನನ್ನ ತಂದೆ ಮತ್ತು ತಾಯಿಯ ಹೆಸರನ್ನು ತೋರಿಸಲು ಸದರಿ ದಾಖಲೆಯನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಲು ನನಗೆ ಯಾವುದೇ ತೊಂದರೆ ಇರುವುದಿಲ್ಲ.

ವಾದಿಯರು ನನ್ನ ಸಹೋದರರಾಗಿದ್ದರಿಂದ , ಅವರಿಗೆ ಆಸ್ತಿಯಲ್ಲಿ ಹಕ್ಕನ್ನು ಕೊಡಬೇಕಾಗುತ್ತದೆ ಎಂಬ ಉದ್ದೇಶದಿಂದ ನಾನು ನ್ಯಾಯಾಲಯದ ಮುಂದೆ ಅವರು ನನ್ನ ಸಹೋದರರಲ್ಲ ಎಂಬುದಾಗಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ದಾವಾ ಸ್ಥಳಗಳ ಮೂಲತಃದ ಕುರಿತಾಗಿ ನನಗೆ ಸ್ಪಷ್ಟವಾದ ಮಾಹಿತಿ ಇರುವುದಿಲ್ಲ. ದಾವಾ ಸ್ಥಳಗಳನ್ನು ನನ್ನ ಅಜ್ಜಿ ನನಗೆ ದಾನವಾಗಿ ನೀಡಿದ್ದಾಳೆ. ನನ್ನ ಅಜ್ಜಿಯ ಹೆಸರು ಜುಮನಾಬಿ ಬಾಬಾ ಸಾಬ್ ಆಗಿರುತ್ತದೆ. ನನ್ನ ಅಜ್ಜಿಯು ನನಗೆ ದಾವಾ ಸ್ಥಳಗಳನ್ನು ದಾನವಾಗಿ ಕೊಟ್ಟ ಬಗ್ಗೆ ದಸ್ತಾವೇಜಾಗಿದ್ದು ಇರುವುದಿಲ್ಲ. ಸದರಿ ದಾವಾ ಸ್ಥಳಗಳು ನನಗೆ ದಾನವಾಗಿ ಬಂದ ಬಗ್ಗೆ ತಹಶೀಲ್ದಾರ ಕಚೇರಿಯಲ್ಲಿ ಮ್ಯೂಟೇಷನ್ ಆಗಿದೆಯಾ ಎಂದಾಗ , ಸಾಕ್ಷಿಯು ಅದರ ಬಗ್ಗೆ ನನಗೆ ಗೊತ್ತಿಲ್ಲ ಎಂಬುದಾಗಿ ನುಡಿದಿದ್ದಾರೆ.

ನನ್ನ ಅಜ್ಜಿಯು ದಾವಾ ಸ್ಥಳಗಳನ್ನು ನನಗೆ ದಾನವಾಗಿ ಕೊಟ್ಟ ಬಗ್ಗೆ ನಾನು ನಮ್ಮ ವಕೀಲರಿಗೆ ಮಾಹಿತಿಯನ್ನು ನೋಡಿದ್ದೇನೆ. ಆ ನಂತರ ನಾನು ಪ್ರತಿವಾದ ಪತ್ರವನ್ನು ಓದಿ ನೋಡಿದ್ದೇನೆ. ದಾವಾ ಸ್ಥಳಗಳನ್ನು ನನ್ನ ಅಜ್ಜಿಯು ನನಗೆ ದಾನವಾಗಿ ನೀಡಿದ್ದಾರೆ ಎಂಬುದಾಗಿ ಸುಳ್ಳು ಸಾಕ್ಷಿಯನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ಥಳಗಳ ಕುರಿತಾಗಿ ನನ್ನ ತಾಯಿಯ ಹೆಸರು ಈ ಹಿಂದೆ ದಾಖಲಾಗಿತ್ತು ಎಂದರೆ ಸರಿ.

(ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗಾಗಿ ಮುಂದೂಡಲಾಯಿತು. )

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತಗೊಳಿಸಲಾಯಿತು.)

ಓ ಹೆ ಕೇ ಸರಿ ಇದೆ.

Sd/-

C/c. ಪ್ರಧಾನ ಪ್ರ ದ ನ್ಯಾದಂ ,ಹೊನ್ನಾವರ.